ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮುಟ್ಟಣ್ಣರವರು ನಿಯಮ-330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.

ನಿ-330 (50)

ವಿಷಯ:

ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಆಪ್ತ ಸಹಾಯಕರಾಗಿ ನೇಮಕವಾಗಿ ನಿಯೋಜನೆ ಮೇಲೆ ಬೆಂಗಳೂರು ಉತ್ತರ ತಾಲ್ಲೂಕು ಕಚೇರಿಯಲ್ಲಿ ವೇತನ ಪಡೆಯುತ್ತಿರುವ ವಿವಿಧ ಇಲಾಖೆಗಳ ನೌಕರರಿಗೆ ಕಳೆದ ನವೆಂಬರ್ ತಿಂಗಳಿನಿಂದ ವೇತನ ಮತ್ತು ಕಳೆದ ಎರಡು ವರ್ಷಗಳಿಂದ ಡಿ.ಎ. ಬಾಕಿ ವೇತನ ಮತ್ತು ವೈದ್ಯಕೀಯ ವೆಚ್ಚ ಮರುಪಾವತಿ ಹಣ ಬಿಡುಗಡೆಯಾಗಿರುವುದಿಲ್ಲ. ಇದರಿಂದ ಸದರಿ ನೌಕರರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಸಂಬಂಧ ನೀಡಲಾಗಿದ್ದ ಗಮನ ಸೆಳೆಯುವ ಸೂಚನೆಗೆ ಈಗಾಗಲೇ ಬಿಡುಗಡೆಯಾಗಿದೆ ಎಂದು ತಪ್ಪು ಉತ್ತರವನ್ನು ನೀಡಲಾಗಿದೆ. ಆದ್ದರಿಂದ ಸದರಿ ನೌಕರರಿಗೆ ವೇತನ ಮತ್ತು ಡಿ.ಎ. ಬಾಕಿ ಹಣ ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂಬ ವಿಷಯದ ಕುರಿತು.

ಉತ್ತರ:

ಮಾನ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳ ಆಪ್ತ ಸಹಾಯಕರುಗಳಾಗಿ ಸರ್ಕಾರದ ಆದೇಶದಂತೆ ವಿವಿಧ ಇಲಾಖೆಗಳಿಂದ ನೇಮಕಗೊಂಡಿರುವ ನೌಕರರಿಗೆ 2019-20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಧಾನ ಲೆಕ್ಕ ಶೀರ್ಷಿಕೆ 2011-ಸಂಸತ್/ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ವಿಧಾನಮಂಡಲಗಳು ಅಡಿಯಲ್ಲಿ ಲೆಕ್ಕ ಶೀರ್ಷಿಕೆ 2011-02-101-0-09 ವಿಧಾನಸಭಾ ಸದಸ್ಯರುಗಳಿಗೆ ಆಪ್ತ ಸಹಾಯಕರು -002 ವೇತನ – ಅಧಿಕಾರಿಗಳು ಮತ್ತು ಇತರೆ ಉಪ ಶೀರ್ಷಿಕೆ ಹಾಗೂ ಲೆಕ್ಕ ಶೀರ್ಷಿಕೆ 2011-02-102-0-09 ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಆಪ್ತ ಸಹಾಯಕರು – 002 ವೇತನ – ಅಧಿಕಾರಿಗಳು ಮತ್ತು ಇತರೆ ಉಪ ಶೀರ್ಷಿಕೆಗಳು ಅಡಿಯಲ್ಲಿ ವೇತನ ಮತ್ತು ಇತರೆ ಭತ್ಯೆಗಳನ್ನು ನೀಡಲಾಗುತ್ತಿದೆ. ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಈ ಬಾಬ್ತು ಕ್ರಮವಾಗಿ ರೂ.464.00 ಲಕ್ಷಗಳು ಹಾಗೂ ರೂ.183.00 ಲಕ್ಷಗಳನ್ನು ಆಯವ್ಯಯದ ಮೂಲಕ ನಿಗದಿಗೊಳಿಸಲಾಗಿದೆ.

ಅದರಂತೆ, ಸದರಿ ಆಪ್ತ ಸಹಾಯಕರ ವೇತನ ಮತ್ತು ಇತರೆ ಭತ್ಯೆಗಳನ್ನು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ(HRMS)ಯಲ್ಲಿ ಕರ್ತವ್ಯನಿರತ ಆಪ್ತ ಸಹಾಯಕರ ಸಂಖ್ಯೆಗನುಗುಣವಾಗಿ ಪ್ರತಿ ಮಾಹೆಯ ಮೊದಲ ವಾರದೊಳಗಾಗಿ ಪಾವತಿಸಲಾಗುತ್ತದೆ.

ಮೇಲಿನಂತೆ ವೇತನ/ಭತ್ಯೆಗಳನ್ನು ನಿಗದಿಗೊಳಿಸಲಾಗಿರುವ ಮಾನ್ಯ ವಿಧಾನಸಭಾ ಸದಸ್ಯರುಗಳ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳ ಆಪ್ತ ಸಹಾಯಕರುಗಳಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಖಜಾನೆಯಿಂದ ಸೆಳೆದು ಪಾವತಿಸುವ ಪ್ರಾಧಿಕಾರ ಕಂದಾಯ ಇಲಾಖೆಯಾಗಿದ್ದು (Drawing & Disbursing Authority) ಅದರನ್ವಯ ವೇತನವನ್ನು ಮ್ಯಾಪಿಂಗ್ ಮಾಡಿ, ಖಜಾನೆ-2 ರ ಮೂಲಕ ವೇತನ ಪಾವತಿಸಲಾಗುತ್ತಿದೆ. ಈ ಹಿಂದೆ ವೇತನವನ್ನು ಖಜಾನೆ-1 ರಲ್ಲಿ ಪಾವತಿಸಲಾಗುತ್ತಿತ್ತು. ಪ್ರಸ್ತುತ ಖಜಾನೆ-2 ಅನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿ ಆ ಮೂಲಕ ವೇತನ ಪಾವತಿಸುತ್ತಿರುವ ಕಾರಣ ಪ್ರಾರಂಭದಲ್ಲಿ ಕೆಲವೊಂದು ತಾಂತ್ರಿಕ ಸಮಸ್ಯೆಗಳು ಉಂಟಾಗಿ ಸದರಿ ಆಪ್ತ ಸಹಾಯಕರ ವೇತನ ಪಾವತಿಯಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ: 01.02.2020ರಂದು ಆರ್ಥಿಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಸುಧೀರ್ಘ ಚರ್ಚೆ ನಡೆಸಿ, ಇನ್ನು ಮುಂದೆ ವೇತನ ಮತ್ತು ಇತರೆ ಭತ್ಯೆಗಳ ಬಿಡುಗಡೆಗೆ ಯಾವುದೇ ಸಮಸ್ಯೆ ಉಂಟಾಗದಂತೆ ಕ್ರಮವಹಿಸುವಂತೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ.

ಪ್ರಸ್ತುತ ವೇತನ ಮತ್ತು ಇತರೆ ಭತ್ಯೆಗಳ ಬಿಡುಗಡೆ ಬಗ್ಗೆ ಹಣ ಬಿಡುಗಡೆ ಪ್ರಾಧಿಕಾರವಾದ ಕಂದಾಯ ಇಲಾಖೆಯಿಂದ ಈ ಬಗ್ಗೆ ಉಂಟಾಗಿರುವ ಅನುದಾನದ ಕೊರತೆಯ ಬಗ್ಗೆ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. ಅವಶ್ಯಕ ವೇತನ ಮತ್ತು ಇತರೆ ಭತ್ಯೆಗಳ ಪಾವತಿಗಾಗಿ ಕ್ರಮವಹಿಸಲಾಗುವುದು.

ಸಂಖ್ಯೆ: ಆಇ 169 ವೆಚ್ಚ-7/2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ